ದಿನಾಂಕ: 16/02/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರ ಶ್ರೀ. ಪಿಟಿಡಿ., ವಕೀಲರಿಂದ:

ದಿನಾಂಕ:26/02/2024 ರಂದು ಆರೋಪಿತರು ನನಗೆ ಹಲ್ಲೆ ಮಾಡಿದ್ದರು ಎಂದು ನಾನು ನಡಿದಿದ್ದು ಸದರಿ ಹಲ್ಲೆಯಿಂದ ನನಗೆ ಬೆನ್ನು ಹಾಗೂ ಕೈಗೆ ಹಲ್ಲೆ ಮಾಡಿರುತ್ತಾರೆ. ಸದರಿ ಹಲ್ಲೆಯಿಂದ ನನಗೆ ರಕ್ತ ಬರುವ ಗಾಯವಾಗಿರಲಿಲ್ಲ. ಆ ಸಮಯದಲ್ಲಿ ನನ್ನ ಮಗ ಸ್ಥಳದಲ್ಲಿ ಇರಲಿಲ್ಲ, ತಕ್ಷಣ ಬಂದು ನನ್ನನ್ನು ಕರೆದುಕೊಂಡು ತಾಯಿ ಮನೆಗೆ ಹೋಗಿರುತ್ತಾರೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನನ್ನ ಮಗ ಬಂದಿದ್ದು ಎಂಬುದಾಗಿ ನಾನು ನುಡಿದಿದ್ದು ಆ ಸವಯದಲ್ಲಿ ಗಲಾಟೆ ಬಿಡಿಸುವ ಪ್ರಯತ್ನವನ್ನು ನನ್ನ ಮಗ ಮಾಡಿರುವುದಿಲ್ಲ. ಚಾಸಾ 4 ಕೂಲಿ ಕೆಲಸವನ್ನು ಮಾಡುತ್ತಿರುತ್ತಾರೆ. ನನ್ನ ತಾಯಿ ಮನೆಗೆ ನಾನು ಹೋಗಿದ್ದೆನು ಎಂದು ನಾನು ನುಡಿದಿದ್ದು ಆ ರೀತಿ ನಾನು ಹೋದಾಗ ನನ್ನ ತಾಯಿ ಮನೆಯಲ್ಲಿ ಯಾರೂ ಇರಲಿಲ್ಲ. ನನ್ನ ತಾಯಿಮನೆಯ ಅಕ್ಕಪಕ್ಕ ವಾಸದ ಮನೆ ಇರುತ್ತವೆ.

ಅಡಿಕೆ ದಬ್ಬೆಯಿಂದ ನನಗೆ ಮೊದಲಿಗೆ ಭವಾನಿ ನಂತರ ಮತ್ತೊಬ್ಬರು ಹಲ್ಲೆ ಮಾಡಿದ್ದರು. ಎಲ್ಲರ ಕೈಯಲ್ಲೂ ಸಹಾ ಅಡಿಕೆ ದಬ್ಬೆ ಇತ್ತು. ಕಮ್ಮರಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇರುತ್ತದೆ ಎಂದರೆ ಸರಿ. ಅದೇ ರೀತಿ ಖಾಸಗಿ ವೈದ್ಯರೂ ಇರುತ್ತಾರೆಎಂದರೆ ಸರಿ. ಹರಿಹರಪುರದಲ್ಲಿರುವಂತಹ ಆರೋಗ್ಯ ಘಟಕ ಕಮ್ಮರಡಿಯಲ್ಲೂ ಇರುತ್ತದೆ ಎಂದರೆ ಸರಿ. ಆ ದಿನ ಕಮ್ಮರಡಿಯ ಆರೋಗ್ಯ ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿ. ನಾನು ಕಮ್ಮರಡಿ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿ. ಹರಿಹರಪುರದ ಆರೋಗ್ಯ ಕೇಂದ್ರದ ಪಕ್ಕದಲ್ಲಿ ಪೊಲೀಸ್ ಠಾಣೆ ಇದೆ ಎಂದರೆ ಸರಿ. ಠಾಣೆಗೆ ಹೋಗಿ ದೂರು ನೀಡವ ಪ್ರಯತ್ನ ನಾನಾಗಲಿ, ನನ್ನ ಮಗ ಮಾಡಿರವುದಿಲ್ಲ ಎಂದರೆ ಸರಿ. ಕಮ್ಮರಡಿಯಿಂದ ಹರಿಹರಪುರಕ್ಕೆ ನಾವು ಬಸ್ ನಲ್ಲಿ ಹೋಗಿದ್ದೆವು. ಆಸ್ಪತ್ರೆಗೆ ಹೋದಾಗ ವೈದ್ಯರಿಗೆ ಸದರಿ ಗಾಯ ಹೇಗಾಯಿತು, ಯಾರು ಮಾಡಿದರು ಎಂದು ನಾನು ತಿಳಿಸಿರುವುದಿಲ್ಲ.

ದಿ:26/02/2024 ರಂದು ನಾನು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನಾನು ದೂರು ನೀಡಿದೆನು ಎನ್ನಲಾದ ದಿನವೇ ಪೋಲಿಸರು ಮದ್ಯಾಹ್ನ ಸ್ಥಳಕ್ಕೆ ಬಂದಿದ್ದರು. ಆ ರೀತಿ ಇಬ್ಬರು ಪೊಲಿಸರು ಸ್ಥಳಕ್ಕೆ ಬಂದಿದ್ದರು. ಪೋಲಿಸರು ಸ್ಥಳಕ್ಕೆ ಬರುವ ವಿಚಾರ ಅವರು ಬಂದ ನಂತರ ನಮಗೆ ಗೊತ್ತಾಯಿತು. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾನು, ನನ್ನ ಮಗ ಮಾತ್ರ ಹೋಗಿದ್ದೆವು. ಆರೋಪಿಯ ತಾಯಿ ಇದೇ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಒಂದು ಸಿವಿಲ್ ವ್ಯಾಜ್ಯದಲ್ಲಿ ತಾತ್ಕಾಲಿಕ ತಡೆಯಾಜ್ಞೆಯನ್ನು ದಿ:21/02/2024 ರಂದು ಪಡೆದಿದ್ದರು ಎಂದರೆ ಸರಿ. ಸದರಿ ಸಂಗತಿಯನ್ನು ನಾನಾಗಲೀ ನನ್ನ ಮಗನಾಗಲೀ ಪೋಲಿಸರಿಗೆ ತಿಳಿಸಿರುವುದಿಲ್ಲ ಎಂದರೆ ಸರಿ. ಮುದ್ದೆ ಕೋಲು ಕೃತ್ಯ ನಡೆದಿದೆ ಎನ್ನಲಾದ ದಿನ ಭವಾನಿಯವರ ಬಳಿ ಇತ್ತು. ಸದರಿ ಮುದ್ದೆಮಾಲು ಕೋಲೇ ಕೃತ್ಯ ನಡೆದಿದೆ ಎನ್ನಲಾದ ದಿನದಂದು ಭವಾನಿ ಅವರ ಬಳಿ ಇದ್ದ ಬಗ್ಗೆ ವಿಶೇಷ ಗುರುತು ಇರುತ್ತದೆಯೇ ಎಂದರೆ ಸಾಕ್ಷಿ ಪೊಲಿಸರು ಬಂದು ತೆಗೆದುಕೊಂಡು ಹೊಗಿರುತ್ತಾರೆ ಎನ್ನುತ್ತಾರೆ. ಮುದ್ದೆ ಮಾಲು ಅಡಿಕೆ ದಬ್ಬೆ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಎಲ್ಲರ ಮನೆಯಲ್ಲೂ ಇರುತ್ತವೆ ಎಂದರೆ ಸರಿ. ಮಹಜರನ್ನು ಯಾರುಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ದೂರು ನೀಡಿದೆನು ಎನ್ನಲಾದ ನಂತರ ಪೊಲಿಸರು ನನ್ನ ಹೇಳಿಕೆ ಪಡೆದಿರುವುದಿಲ್ಲ. ದಿ:26/02/2024 ರಂದು ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡಿದರು ಎಂಬುದಾಗಿ ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ:26/02/2024 ರಂದೇ ನಾನು ಹಾಗೂ ಚಾಸಾ 4 ರವರಾದ ನನ್ನ ಮಗ ಆರೋಪಿತರ ವಿರುದ್ಧ ಹಲ್ಲೆ ಮಾಡಿದ್ದರಿಂದ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ತಾಯಿ ಸರಸ್ವತಮ್ಮನವರು ಒಎಸ್ 14/2024 ರಂತೆ ಶಾಶ್ವತ ನಿರ್ಬಂಧಕ್ಕಾಗಿ ದಾವೆ ಸಲ್ಲಿಸಿದ್ದು ಸದರಿ ದಾವೆಯಲ್ಲಿ ನಮ್ಮ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆಯಾಗಿದ್ದರಿಂದ ಆ ದ್ವೇಷದಿಂದ ಸುಳ್ಳು ದುರು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬಂದಿರುವುದಿಲ್ಲ, ಯಾವುದೆ ಮಹಜರ್ ಜರುಗಿಸಿರುವುದಿಲ್ಲ, ಮುದ್ದೆಮಾಲನ್ನು ವಶಕ್ಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ತಾಯಿ ನಮ್ಮಗಳ ವಿರುದ್ಧ

ಸಿವಿಲ್ ದಾವೆ ಹೂಡಿದ್ದರಿಂದ ನಾನು ಹಾಗೂ ನನ್ನ ಮಗ ಅವರ ಮಕ್ಕಳ ವಿರುದ್ದ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಃ ಮರು ವಿಚಾರಣೆ ಇಲ್ಲಾಃ

(ದಿನಾಂಕ:16/02/2026 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಇ. ಓ.

ಸಹಿ/-
(ನಂದಿನಿ ಎಂ ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ